# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| 1)ಶ್ರೀ ರಾಮಪ್ಪ ತಂದೆ ಬಂಡ ಭೀಮಪ್ಪ | ಕಂದಾಯ ಪರಿವೀಕ್ಷಕರು, ಮೋಕಾ |

ವಿಷಯ:-ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಕಾರೇಕಲ್ಲು ಗ್ರಾಮದ ಸರ್ವೆ ನಂ:216 ವಿಸ್ತೀರ್ಣ:13.11 ಎಕರೆ ಜಮೀನಿನ ವಿಚಾರಣೆ ಕುರಿತು.

ಉಲ್ಲೇಖ:ಕಂದಾಯ ಪರಿವೀಕ್ಷಕರು, ಮೋಕಾ ಇವರ M.RO39/2012-13 ದಿನಾಂಕ: 10-06-2013

******

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಕಾರೇಕಲ್ಲು ಗ್ರಾಮದ ಸರ್ವೆ ನಂ:216 ವಿಸ್ತೀರ್ಣ:13.11 ಎಕರೆ ಜಮೀನಿ ಹಾಲಿ ಭೂಮಾಲಿಕರಾದ ಶ್ರೀಮತಿ ಮಹಂಕಾಳಮ್ಮ ಗಂಡ ಅಗಸರ ಮಡಿವಳ, ಶ್ರೀ ಯಲ್ಲಪ್ಪ ತಂದೆ ಅಗಸರ ಮಡಿವಳ ಇವರಿಂದ ಶ್ರೀ ರಾಮಪ್ಪ ತಂದೆ ಬಂಡ ಭೀಮಪ್ಪ ಇವರಿಗೆ ಕ್ರಯ ಪತ್ರ ಸಂಖ್ಯೆ:892/ 1982-83 ದಿನಾಂಕ: 19-06-1982ರಂತೆ ಖರೀದಿಗೆ ಮಾರಟ ಮಾಡಿರುತ್ತಾರೆ. ಅದರಂತೆ ಕ್ರಯದಾರರು ಹಕ್ಕು ಬದಲಾವಣೆಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ M.RO39/2012-13 ದಿನಾಂಕ:10-06-2013ರ ಪ್ರಕಾರ ವಿಸ್ತೀರ್ಣ:13.11 ಎಕರೆ ಮುಟೇಷನ್ ಮಾಡಲಾಗಿತ್ತು. ಆದರೆ ಪಹಣಿ ಕಾಲಂ 9ರಲ್ಲಿ ನೀಲಮ್ಮ ಗಂಡ ದಿ॥ ಲಕ್ಷ್ಮಣ, ಬಸಮ್ಮ ಗಂಡ ದಿ॥ ಮಲ್ಲಪ್ಪ ಮೇಲಿನವರೊಂದಿಗೆ ಜಂಟಿಯಾಗಿ ವಿಸ್ತೀರ್ಣ:0.10.00 ಸೇಂಟ್ಸ್ ತೆಗೆಯಲ್ಲು ಮನವಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ಕಂದಾಯ ಪರಿವೀಕ್ಷಕರು ಮೋಕಾ ಇವರು ಪಹಣಿ ಕಾಲಂ 3ರಲ್ಲಿ ವಿಸ್ತೀರ್ಣ:13.21 ಎಕರೆ ಇದ್ದು ಜಂಟಿದಾರರನ್ನು ತೆಗೆಯಲು ಮನವಿ ಸಲ್ಲಿಸಿರುವುದರಿಂದ ಸದ್ರಿ ಕಡತವನ್ನು ಪರಿಶೀಲಿಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:28-03-2016 ಮತ್ತು 04-04-2016ರಂದು ವಿಚಾರಣೆ ನಡೆಸಲಾಗಿ ಅರ್ಜಿದಾರರು ಮತ್ತು ಜಂಟಿದಾರರು ಪ್ರಕಾರಣಕ್ಕೆ ಹಾಜರಾಗಿ ತಪ್ಪಾಗಿ ನಮೂದು ಆಗಿರುವ ಬಸಮ್ಮ ಗಂಡ ದಿ॥ ಮಲ್ಲಪ್ಪ ಇವರ ಹೆಸರುಗಳನ್ನು ತೆಗೆಯಲು ಲಿಖಿತ ಹೇಳಿಕೆ ನೀಡಿರುವುದರಿಂದ ಈಕೆಳಗಿನಂತೆ ಆದೇಶ.

101

-::ಆದೇಶ::-

ಸಂ/ಕಂ/ವಿವಾದ/ 89 /2016-17 ದಿನಾಂಕ: 06 /06/2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಕಾರೇಕಲ್ಲು ಗ್ರಾಮದ ಸರ್ವೆ ನಂ:216 ವಿಸ್ತೀರ್ಣ:13.11 ಎಕರೆ ಜಮೀನನ್ನು ಆಕಾರಬಂದ ಮತು ಡೈಯಾಗ್ಲಟ್ ಪ್ರಕಾರ ಪಹಣಿ ಕಾಲಂ 3ರಲ್ಲಿ ವಿಸ್ತೀರ್ಣ:13.11 ಎಕರೆ ಎಂದು ನಮೂದಿಸಿ ಪಹಣಿ ಕಾಲಂ 9ರಲ್ಲಿ ಇರುವ ಬಸಮ್ಮ ಗಂಡ ದಿ॥ ಮಲ್ಲಪ್ಪ ಇವರ ಹೆಸರುಗಳನ್ನು ತೆಗೆದುಹಾಕಿ ಶ್ರೀ ರಾಮಪ್ಪ ತಂದೆ ತೆಲ್ಲ ಬಂಡ ಭೀಮಪ್ಪ, ನೀಲಮ್ಮ ಗಂಡ ದಿ॥ ಲಕ್ಷ್ಮಣ ಇವರ ಹೆಸರಿಗೆ ವಿಸ್ತೀಣ:13.11 ಎಕರೆ ಜಂಟಿಯಾಗಿ ಉಳಿಸಿ ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 06.06.16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

6/6/16
ತಹಶೀಲ್ದಾರರು
ತಹಶೀಲ್ದಾರರು, ಬಳ್ಳಾರಿ
Tasildar, Bellary.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ

7/6/06